ಐರಿನಾ ಶುವಾಲೊವಾ
ಅವರ ಕವಿತೆ



# ನಡೆದಾಡುವ ನೆಡುತೋಪು

ಹೋಗು ತಪ್ಪಿಸಿಕೊಂಡು ಓಡಿ ಹೋಗು
ಅವಕಾಶ ಇರುವಾಗಲೇ ಪಲಾಯನ ಮಾಡು
ಕೊನೆಯ ರೈಲಿಗೆ ಟಿಕೆಟ್ ಖರೀದಿಸಿ ಇಟ್ಟುಕೋ
ಹೊಳೆ ಇಳಿದಂತೆ
ತೋರುವುದು ಅವಿತಿದ್ದ ನದಿ ಬಯಲ ಕಲ್ಲು ದಾರಿ,
ನಿನ್ನದೇ ಹಾಸಿಗೆಯಲ್ಲಿ ಬೆತ್ತಲಾಗಿ ಮಲಗಿರುವ ಅಪರಿಚಿತ ವ್ಯಕ್ತಿಯ ಹಾಗಿರುವ
ನಗರದ ಕಸುವುಳ್ಳ ನರ ನಾಡಿಗಳು
ಅನಾವರಣಗೊಳ್ಳುತ್ತವೆ
ಹ್ಮ್ ಬೇಗ ಓಡು ಓಡು
ಸಾಧ್ಯವಿರುವಾಗಲೆ ತಪ್ಪಿಸಿಕೊ ತಪ್ಪಿಸಿಕೊ

ನಿನಗೆ ಸೇರಿದ ಎಲ್ಲವನ್ನ ಬಾಚಿಕೋ
ನಿನ್ನದೇನಿದೆಯೋ ಎಲ್ಲ ಎಲ್ಲವನ್ನ
ಬಿರಿದ ತುಟಿಗಳನ್ನ, ಮೊಣಕಾಲಿನ ಗಾಯಗಳನ್ನ
ನೆನಪುಗಳು ನಿಧ ನಿಧಾನಕ್ಕೆ ಒಸರುವ ಒಡೆದ ತಲೆ ಜಾಡಿಯನ್ನ
ಹಾಗೆಯೇ ಬಿಡಬೇಕಿರುವದನ್ನು ಅಲ್ಲೇ ಬಿಟ್ಟು ಬಿಡು
ಕಿಟಕಿಗಳಿಂದ ತೂರಿಬರುವ ಸಂಜೆಯ ಬೆಳಕನ್ನ
ನಲ್ಮೆಯಾಕಾಶದ ತೆರೆದ ಗಂಟಲನ್ನ
ಮನೆ ಬೀದಿಯ ಪರಿಚಿತ ಘಮಲನ್ನ
ದಾರಿ ತೋರುವ ನದಿಯನ್ನ

ಹೋಗು ಮತ್ತೆಂದಿಗೂ ಹಿಂದಿರುಗಿ ಬರಬೇಡ
ಇದು ಇರುವುದೇ ಹೀಗೆ ಸಂದೇಹ ಬೇಡ
ತಳವಿಲ್ಲದ ದೇಹದ ಬಾವಿಯೊಳಗೆ ಬೀಳಲು
ನಿನ್ನದೇ ತೋಳುಗಳಿಗೆ ಬಾಚಣಿಗೆಯಂತೆ ಇಳಿಯಲು
ಯೋಧರ ಸಂತತಿ ಮತ್ತೆ ಮತ್ತೆ ಹುಟ್ಟಿಬರುವಂತೆ
ನೆಲದಲ್ಲಿ ನಿನ್ನನ್ನೇ ಬಿತ್ತಲು

ಹೀಗೇ ಸೂಜಿಯೊಂದು ಸೂಜಿಯ ಕಣ್ಣೊಳಗಿಂದ ಹಾದು ಹೋಗುವುದು
ಹೀಗೆಯೇ ಕಾಡು ಗೋಡೆಗಳ ಹತ್ತಿರಹತ್ತಿರ ಬರುವುದು
ಹತ್ತಿರ ಬಂದು, ಥರ ಥರ ಕಂಪಿಸುವುದು,
ಥರ ಥರ ನಡುಗುವುದು